# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 138 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.12.2022 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ಹಲವಾರು ಖಾಸಗಿ ಆಸ್ಪತ್ರೆಗಳು ಹಲಾಲ್ ಸರ್ಟಿಫೈಡ್ ಆಸ್ಪತ್ರೆ ಎಂಬುದಾಗಿ ಘೋಷಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು; | ಇಲ್ಲ. |
| ಆ) | ಸರ್ಕಾರವು ಹಲಾಲ್ ಪ್ರಮಾಣೀಕೃತ ಆಸ್ಪತ್ರೆ ಎಂಬುದಾಗಿ ಪ್ರಮಾಣ ಪತ್ರವನ್ನು ನೀಡುತ್ತಿದೆಯೇ; ಇಲ್ಲವಾದಲ್ಲಿ, ಹಲಾಲ್ ಪ್ರಮಾಣೀಕೃತ ಆಸ್ಪತ್ರೆ ಎಂಬುದಾಗಿ ಜಾಹೀರಾತು ನೀಡುವ ಆಸ್ಪತ್ರೆಗಳ ಅನುಮತಿ ರದ್ದುಗೊಳಸಲು ಸರ್ಕಾರ ಕೈಗೊಂಡ ಕ್ರಮಗಳೇನು: | ಹಲಾಲ್ ಪ್ರಮಾಣೀಕೃತ ಆಸ್ಪತ್ರೆ ಎಂಬುದಾಗಿ ಸರ್ಕಾರವು ಯಾವುದೇ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ. ಅಂತಹ ಪ್ರಕರಣಗಳು ಕಂಡುಬಂದರೆ ಕೆ.ಪಿ.ಎಂ.ಇ ಕಾಯ್ದೆ ಅಡಿಯಲ್ಲಿ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು. |
| ಇ) | ಆಸ್ಪತ್ರೆಯು ಹಲಾಲ್ ಪ್ರಮಾಣೀಕೃತವಾಗಬೇಕಾದಲ್ಲಿ, ಇರಬೇಕಾದ ಅರ್ಹತೆಗಳೇನು: ಸರ್ಕಾರವು ಈ ರೀತಿಯ ಪ್ರಮಾಣ ಪತ್ರಗಳನ್ನು ನೀಡಲು ಯಾವ ಸಂಸ್ಥೆಯವರಿಗೆ ಅನುಮತಿ ನೀಡಲಾಗಿದೆ ಇಲ್ಲವಾದಲ್ಲಿ, ಅನುಮತಿ ನೀಡುವ ಸಂಸ್ಥೆಗಳ ಮೇಲೆ ಹಾಗೂ ಈ ಪ್ರಮಾಣ ಪತ್ರಗಳನ್ನು ಸರ್ಕಾರದ ಅನುಮತಿ ಇಲ್ಲದೆ ಪ್ರದರ್ಶಿಸುವ ಆಸ್ಪತ್ರೆಗಳ ಮೇಲೆ ಸರ್ಕಾರ ಯಾವ ರೀತಿಯ ಕಾನೂನು ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು). | |
| ಈ) | ಹಲಾಲ್ ಪ್ರಮಾಣೀಕೃತ ಆಸ್ಪತ್ರೆ ಎಂಬುದಾಗಿ ಘೋಷಿಸಿಕೊಂಡು ಜಾಹೀರಾತು ನೀಡುವುದರಿಂದ ಬಹುಸಂಖ್ಯಾತ ರೋಗಿಗಳಿಗೆ ಇಂತಹ ಆಸ್ಪತ್ರೆಗಳು ನೀಡುವ ಚಿಕಿತ್ಸೆಯ ಮೇಲೆ ಅಪನಂಬಿಕೆ ಉಂಟಾಗುವ ಕುರಿತು ಮತ್ತು ಹಲಾಲ್ ಸರ್ಟಿಫೈಡ್ ಆಸ್ಪತ್ರೆಗಳಿಂದ ಚಿಕಿತ್ಸೆ ಪಡೆದ ಇತರೆ ಧರ್ಮದ ರೋಗಿಗಳು ಮೃತರಾದಲ್ಲಿ, ಸರ್ಕಾರವು ಯಾರನ್ನು ಹೊಣೆಗಾರರನ್ನಾಗಿ ಮಾಡುತ್ತದೆ? (ವಿವರ ನೀಡುವುದು) | ಖಾಸಗಿ ಆಸ್ಪತ್ರೆಗಳಲ್ಲಿ ಎಲ್ಲಾ ಚಿಕಿತ್ಸೆಯನ್ನು Clinical Establishments ಕಾಯ್ದೆ ಮತ್ತು ಕೆ.ಪಿ.ಎಂ.ಇ ಕಾಯ್ದೆ ಅನುಗುಣವಾಗಿ ಒದಗಿಸುತ್ತಿದ್ದು, ಈ ಕಾಯ್ದೆಯನ್ನು ಉಲ್ಲಂಘಿಸಿದಲ್ಲಿ ಕೆ.ಪಿ.ಎಂ.ಇ ಪ್ರಾಧಿಕಾರವು ಕ್ರಮಕೈಗೊಳ್ಳುತ್ತದೆ. |

**ಸಂಖ್ಯೆ: ಆಕುಕ 94 ಎಸ್.ಟಿ.ಕ್ಯೂ 2022**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು